Journals
Association of India

# SANSHODHANA MARGA

# ಸಂಶೋಧನಾ ಮಾರ್ಗ

*Peer Reviewed Journal of Social Science, Humanities and Languages*

ಸಂಪುಟ -7, ಸಂಚಿಕೆ -3 ಏಪ್ರಿಲ್ 1 2021 ರಿಂದ ಮೇ 15 2021, ಪುಟಗಳು III+150 ರೂ. 150/-

**Volume-7. Issues-3, April 1 2021 to May 15 2021, Pages III+150 Rs. 150/-**

Chief Editor
**Dr. Madhu,** *Ph.D.*

Published by
**Institute of Praja Vikasa**
Mysuru

Arts and Commerce College BANHATTI 587 311

Journals
Association of India

S.T.C. Arts and Commerce College BANHATTI 587 311


# ಸಂಪಾದಕ ಮಂಡಳಿ

**ಪ್ರಧಾನ ಸಂಪಾದಕರು**
ಡಾ. ಮಧುಗುಂಡ್ಲುಪೇಟೆ

**ಹಿರಿಯ ಸಂಪಾದಕರು**
ಪ್ರೊ. ಮಹೇಶ್‌ಚಂದ್ರಗುರು

**ಸಂಪಾದಕ ಮಂಡಳಿ ಸದಸ್ಯರು**

ಪ್ರೊ.ಡಿ.ಆನಂದ್, (ಮೈಸೂರು)
ಪ್ರೊ.ಎಂ.ಆರ್.ಗಂಗಾಧರ್, (ಮೈಸೂರು)
ಪ್ರೊ.ನಂಜಯ್ಯ ಹೊಂಗನೂರು, (ಮೈಸೂರು)
ಡಾ.ಗುರುಸಿದ್ದಯ್ಯ, ಸಿ, (ಮೈಸೂರು)
ಡಾ. ಎಂ. ಎಸ್. ಬೆನ್ನೂರ
ಪ್ರೊ.ಜೆ.ಸೋಮಶೇಖರ್, (ಮೈಸೂರು)
ಪ್ರೊ.ದಿ.ನಾಗರಾಜು, (ಮೈಸೂರು)
ಪ್ರೊ.ಸಿ.ಕೆ.ಪುಟ್ಟಸ್ವಾಮಿ, (ಮೈಸೂರು)
ರಮೇಶ್ ಜಯರಾಮಯ್ಯ, (ಮೈಸೂರು)

**ಸಾಂಖ್ಯಿಕ ಸಂಪಾದಕರು**

ಪ್ರೊ.ಅನ್ನಪೂರ್ಣ ಎಂ (ಮೈಸೂರು)
ಡಾ.ಎಸ್.ವೆಂಕಟೇಶ್, (ಮೈಸೂರು)
ಪ್ರೊ.ಗುರುಲಿಂಗಯ್ಯ (ಶಿವಮೊಗ್ಗ)
ಡಾ.ಮಾರುತಿ (ಬೆಂಗಳೂರು)
ಡಾ.ಎಲ್.ಶ್ರೀನಿವಾಸ್ (ಹಂಪಿ)
ಕಿರಣ್‌ಕಮಲ್ ಪ್ರಸಾದ್ (ಬೆಂಗಳೂರು)
ಸಿ. ಹರಕುಮಾರ್ (ಮೈಸೂರು)
ಡಾ.ರಾಮಚಂದ್ರ (ಮೈಸೂರು)
ಪ್ರೊ.ಮನೋಹರ್‌ಯಾದವ್ (ಬೆಂಗಳೂರು)
ಪ್ರೊ.ವಿಶ್ವನಾಥ್ (ಮಂಗಳೂರು)
ಪ್ರೊ.ಟಿ.ಎಚ್.ಮೂರ್ತಿ (ಬೆಂಗಳೂರು)
ಡಾ. ಯಶೋಧ (ಮೈಸೂರು)
ಡಾ.ಮಂಗಳಮೂರ್ತಿ (ಮೈಸೂರು)
ಡಾ. ಆಂಜನೇಯ (ಮೈಸೂರು)

**ತಾಂತ್ರಿಕ ಸಹಾಯಕರು**
ಅಂತೋಣಿ ಪ್ರಜ್ವಲ್

**ಸಂಚಾಲಕರು**
ಶ್ರೀಮತಿ ಜೆ.ಪಿ.ಮೋಕ್ಷರಾಣಿ
ಮೇರಿ ಸ್ವೆಲ್ಲಾ ಎಂ.
ವಿನುತ ಎಂ.ಆರ್

**ಕಾನೂನು ಸಲಹೆಗಾರರು**
ಎನ್.ಡಿ. ಮಹೇಶ್, ವಕೀಲರು, ಮೈಸೂರು


₹ 150

ಹಕ್ಕುಗಳು ಪ್ರಕಾಶಕರದು

Owned, Edited & Published by: Dr.Madhu, #LIG 689, 1st Stage, Hudeo House, Hebbal, Mysore Distri
Karnataka.
Printed by RAMANATHA GUPTA M.S, # 1130/8-6-7, F-37, 38, S.J.H.Road, Vidyaranyapura, Mysor-(
Printed at GUPTA OFFSET PRINERS, # 1130/8-6-7, F-37, 38, S.J.H.Road, Vidyaranyapura, Mysor-0(





# ಪರಿವಿಡಿ


| | | ಪು.ಸಂಖ್ಯೆ |
|---|---|---|
| 1. | ವಸಾಹತುಶಾಹಿಗಳ ಕಾಲದ ಜಮಖಂಡಿ ಸಂಸ್ಥಾನದ ರಾಜಕೀಯ ಚರಿತ್ರೆ<br>*ಡಾ. ಎಂ. ಎಸ್. ಬೆನ್ನೂರ | 1–10 |
| 2. | ದಲಿತರ ಅರಿವು – ಅವಮಾನ: ಸಮಕಾಲೀನತೆಯನ್ನು ಅನುಲಕ್ಷಿಸಿ.<br>ಚಂದ್ರಶೇಖರ ಎಚ್, ಆರ್. | 11–16 |
| 3. | ಪೌರಾಣಿಕ ಹಾಗೂ ಸಾಂಸ್ಕೃತಿಕ ಚಹರೆಯಲ್ಲಿ ಮಾದಿಗರು<br>ಮಾಲತೇಶ್ ಎಂ. ಪೂಜಾರ್ | 17–35 |
| 4. | ಗ್ರಾಮೀಣ ಮಾರುಕಟ್ಟೆಯಲ್ಲಿ ರೈತರಿಗೆ ಸರ್ಕಾರದ ರೈತಪರ ಯೋಜನೆಗಳಿಂದಗಾಗುವ ಅನುಕೂಲಗಳು ಮತ್ತು ಅನಾನುಕೂಲಗಳು<br>*ರಾಜೇಶ್ವರಿ.ಜಿ | 36–58 |
| 5. | ಅಂಬೇಡ್ಕರ್ ಚಿಂತನೆ ಮತ್ತು ಮಹಿಳೆ<br>ಡಾ.ಎಸ್.ಕೆ. ಲೋಲಾಕ್ಷಿ | 59–70 |
| 6. | ಜಾನಪದ ಸಾಹಿತ್ಯದಲ್ಲಿ ತಾಯಿ<br>ಬಸವರಾಜಪ್ಪ, ವಿ. | 71–92 |
| 7. | ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ, 2006 2007ರ2) (29ನೇ ಡಿಸೆಂಬರ್, 2006)<br>*ಡಾ.ಮಧು ಗುಂಡ್ಲುಪೇಟೆ | 93–114 |
| 8. | ಕರ್ನಾಟಕ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಹಣಕಾಸಿನ ನಿರ್ವಹಣೆ<br>*ಇ.ದಸ್ತಗಿರಿ ಸಾಹೇಬ್ | 115–150 |

VOL-7, ISSUE -3, April 01, 2021 to May 15, 2021
ಸಂಪುಟ-7, ಸಂಚಿಕೆ-3, ಏಪ್ರಿಲ್ 01, 2021 ರಿಂದ ಮೇ 15, 2021
ISSN-2454-678X

S.T.C. Arts and Commerce College BANHATTI 587 311

# ವಸಾಹತುಶಾಹಿಗಳ ಕಾಲದ ಜಮಖಂಡಿ ಸಂಸ್ಥಾನದ ರಾಜಕೀಯ ಚರಿತ್ರೆ

*ಡಾ. ಎಂ. ಎನ್. ಬೆನ್ನೂರ

**ಪ್ರಸ್ತಾವನೆ:**

ಜಮಖಂಡಿ ರಾಜಕೀಯ ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಕ ದೃಷ್ಟಿಯಿಂದ ಬಹು ಶ್ರೀಮಂತ ಪ್ರದೇಶವಾಗಿದೆ. ಮಹಾ ಕವಿ ರನ್ನ ಈ ನಾಡನ್ನು ಕುರಿತು ತನ್ನ ಕೃತಿಯಲ್ಲಿ ಈ ರೀತಿ ಉಲ್ಲೇಖಿಸಿದ್ದಾನೆ.

ಬೆಳಗಲಿಯಯ್ನುರರೊಳ
ಗ್ಗಳಮೆನಿಸುವ ಜಂಬುಖಂಡಿಯಪ್ಪತ್ತರ್ಕಂ
ತಿಳಕಮನೆ ನೆಗಳ್ದಿ ಮುದುವೊಳ್ದಿ
ಲೊಳೆಮಟ್ಟಿ ಸುಮುತ್ರನೆನೆಸಿದಂ ಕವಿರತ್ನಂ

ಇಂತಹ ಐತಿಹಾಸಿಕ ಚರಿತ್ರೆಯನ್ನು ಹೊಂದಿದ ಈ ಸೊಬಗಿನ ಜಮಖಂಡಿ ಪ್ರಾಗೈತಿಕ ಶಿಲಾಯುಗದಿಂದ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತು. ಮುಂದೆ 18 ನೇಯ ಶತಮಾನದಲ್ಲಿ ಪಟವರ್ಧನ ಎಂಬ ಕೊಂಕಣಸ್ಥ ಚಿತ್ಪಾವನ ಬ್ರಾಹ್ಮಣ ವಂಶಸ್ಥರು ಸ್ವತಂತ್ರ ಜಮಖಂಡಿ ಸಂಸ್ಥಾನವನ್ನು ಸುಮಾರು 163 ವರ್ಷಗಳ ಕಾಲಾವಧಿಯವರೆಗೆ ಆಳ್ವಿಕೆ ಮಾಡಿದರು.

---

*ಸಹಪ್ರಾಧ್ಯಾಪಕರು, ಮುಖ್ಯಸ್ಥರು, ಇತಿಹಾಸ ವಿಭಾಗ, ಎಸ್.ಟಿ.ಸಿ. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಬನಹಟ್ಟಿ – 587311.

S.T.C. Arts and Commerce College BANHATTI 587 311


ISSN-2454-678X

15ನೇ ಆಗಸ್ಟ್ 1947 ಭಾರತೀಯರಿಗೆ ಅಂದು ಹಬ್ಬದ ದಿನ. ಅಂದು ದೆಹಲಿಯ ಕೆಂಪು ಕೋಟೆಯಲ್ಲಿ ಸ್ವಾತಂತ್ರ್ಯ ಧ್ವಜವನ್ನು ಹಾರಿಸಲಾಗಯಿತು. ಸ್ವಾತಂತ್ರ್ಯ ಸಿಗುವುದಕ್ಕಿಂತ ಪೂರ್ವದಲ್ಲಿ ಅಖಂಡ ಭಾರತ ಎರಡು ಪ್ರಮುಖ ನೆಲೆಯಾಗಿತ್ತು. ಅಂದಿನ ಪ್ರಕಾರ ಹಿಂದೂಸ್ಥಾನ ಮತ್ತು ಪಾಕಿಸ್ತಾನ ಈ ಎರಡು ಪ್ರದೇಶಗಳಲ್ಲಿ ಒಟ್ಟು 693 ದೇಶಿಯ ಸಂಸ್ಥಾನಗಳು ಆಳ್ವಿಕೆ ಮಾಡುತ್ತಿದ್ದವೆಂದು ಆಧಾರಗಳು ತಿಳಿಸುತ್ತವೆ. ಅವುಗಳು ತಮ್ಮದೇ ಆದ ಕಾಯ್ದೆ ಕಾನೂನುಗಳಿಂದ ಸ್ವತಂತ್ರವಾಗಿ ಆಳ್ವಿಕೆಗೆ ಒಳಪಟ್ಟಿದ್ದವು. ದೇಶಕ್ಕೆ ಸ್ವಾತಂತ್ರ್ಯ ಲಭಿಸಿದಾಗ 565 ಸಂಸ್ಥಾನಗಳು ಭಾರತದಲ್ಲಿ ಉಳಿದವು.

ಮಹಾತ್ಮ ಗಾಂಧಿಜೀಯವರ ಹತ್ಯೆಯ ತರುವಾಯ ಜವಾಹರಲಾಲ ನೆಹರು ಹಾಗೂ ಸರ್ದಾರ ವಲ್ಲಭಾಯಿ ಪಟೇಲ ಅವರ ನೇತೃತ್ವದಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿ ವರೆಗೆ ದೇಶಿಯ ಸಂಸ್ಥಾನಗಳನ್ನು ವಿಲೀನಿಕರಣಗೊಳಿಸಬೇಕೆಂಬ ಮಸೂದೆಯನ್ನು ಹೊರಡಿಸಲಾಯಿತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಜಮಖಂಡಿಯ ರಾಜನಾದ ಶ್ರೀಮಂತ ಪರಶುರಾಮ ಬಾಹು ಪಟವರ್ಧನ ಹಾಗೂ ಅಂದಿನ ದಿವಾನರಾದ ರಾವ್‌ಬಹಾದ್ದೂರ ನಾಗೇಶ ಕಾಶಿನಾಥ ಲೆಲೆ ಮತ್ತು ಗೃಹ ಸಚಿವ ಶ್ರೀ ಬಿ. ಡಿ. ಜತ್ತಿಯವರು ಚರ್ಚಿಸಿ, 1947 ಸೆಪ್ಟೆಂಬರ್ 30 ರಂದು ಒಂದು ಸುತ್ತೋಲೆಯನ್ನು ಹೊರಡಿಸಿ ಜಮಖಂಡಿಯನ್ನು ಭಾರತದಲ್ಲಿ ವಿಲೀನಿಕರಣಗೊಳಿಸಲು ನಿರ್ಣಯಿಸಲಾಯಿತು. ಈ ಪ್ರಕಾರ 1948 ಮಾರ್ಚ 18 ರಂದು ಸಂಸ್ಥಾನವನ್ನು ಭಾರತದಲ್ಲಿ ವಿಲೀನಿಕರಣಗೊಳಿಸಿದರು. ಇದು ಭಾರತದ ಸಂಸ್ಥಾನಿಕರಲ್ಲಿ ಮೊಟ್ಟಮೊದಲನೆಯದಾಗಿ ವಿಲೀನಿಕರಣಗೊಂಡಂತಹ ಸಂಸ್ಥಾನವಾಗಿದೆ. ದಕ್ಷಿಣ ಮರಾಠಿಗರ 18 ಸಂಸ್ಥಾನಗಳಲ್ಲಿ ಜಮಖಂಡಿ ಸಂಸ್ಥಾನವು ಕೂಡ ಒಂದಾಗಿದೆ. ಜಮಖಂಡಿ ಸಂಸ್ಥಾನವು ಈ ಪೂರ್ವದಲ್ಲಿ ಅನೇಕ ರಾಜಮನೆತನಗಳ ಆಳ್ವಿಕೆಗೆಒಳಪಟ್ಟಿರುವುದು ಶಾಸನಗಳಿಂದ ತಿಳಿಯಲಾಗಿದೆ. ಮುಂದೆ




ISSN-2454-678X

ಆದಿಲ್‌ಶಾಹಿಗಳು, ಮೊಘಲರು, ಮರಾಠ ಪೇಶ್ವೆಗಳು ಹಾಗೂ ಬ್ರಿಟೀಷ ಸಾಮ್ರಾಜ್ಯದ ಆಳ್ವಿಕೆಗೆ ಒಳಪಟ್ಟಿತು.

ಹೀಗೆ ಸಂಸ್ಥಾನ ರಾಜಕೀಯ, ಆಡಳಿತ, ಶೈಕ್ಷಣಿಕ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪ ಮುಂತಾದ ಕ್ಷೇತ್ರಗಳಲ್ಲಿ ಮರಾಠ ಮತ್ತು ಬ್ರಿಟೀಷರ ಸಹಯೋಗದೊಂದಿಗೆ ಅಭಿವೃದ್ಧಿಗೊಳಿಸಿದರು. ಕಿ.ಶ. 1707 ರಲ್ಲಿ ಔರಂಗಜೇಬನ ಮರಣದ ತರುವಾಯ ಪೇಶ್ವೆಗಳ ಮುಂಖಡತ್ವದಲ್ಲಿ ಮರಾಠಿ ಸಾಮ್ರಾಜ್ಯ ಸಾರ್ವಭೌಮತ್ವ ಪಡೆದು ಭಾರತದ ತುಂಬೆಲ್ಲಾ 1/4 ಚೌತಾ ಕಂದಾಯವನ್ನು ಸಂಗ್ರಹಿಸುವ ಹಕ್ಕನ್ನು ಪಡೆಯಿತು. ಇದಕ್ಕಾಗಿ ಪೇಶ್ವೆಗಳು ತಮ್ಮ ಕೈಕೆಳಗೆ ಉತ್ತರ, ಪೂರ್ವ, ಪಶ್ಚಿಮ, ಮಧ್ಯಭಾರತ ಹಾಗೂ ದಕ್ಷಿಣ ಭಾರತದಲ್ಲಿ ಚೌತಾ ವಸೂಲಿ ಮಾಡಲು ಗಾಯಕವಾಡ, ಹೊಳ್ಕರ, ಶಿಂಧೆ, ಪವಾರ, ಬುಂದೇಲ್ ಹಾಗೂ ಕರ್ನಾಟಕ ಮಹಾರಾಷ್ಟ್ರದಲ್ಲಿ ಬ್ರಾಹ್ಮಣ ಜಾಹಗೀರದಾರರಾದ ಸಾಂಗಲಿ, ಮಿರಜ, ತಾಸಗಾಂವ, ಕುರಂದವಾಡ ಮತ್ತು ಜಮಖಂಡಿ ಪಟವರ್ಧನ ಎಂಬುವರನ್ನು ಒಳಗೊಂಡಿತ್ತು. ಜಮಖಂಡಿ ಪಟವರ್ಧನ ರಾಜಾ ತುಂಗಭದ್ರಾ ನದಿಯ ವರೆಗೆ ಚೌತಾ ವಸೂಲಿ ಮಾಡುವ ಅಧಿಕಾರವನ್ನು ಪಡೆದುಕೊಂಡನು.

**ಜಮಖಂಡಿ ಸಂಸ್ಥಾನದ ಮೂಲ:**

ಜಮಖಂಡಿ ಪಟವರ್ಧನ ಸಂಸ್ಥಾನಿಕರು ಮೂಲತಃ ಚಿತ್ಪಾವನ ಬ್ರಾಹ್ಮಣರು. ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಕೊತವಾಡೆಯಲ್ಲಿ **ಹರಭಟ್ಟ ಬಾಳಂಭಟ್ಟ ಪಟವರ್ಧನ** ಎಂಬುವನು ಪುಳೆಯಲ್ಲಿ ಗಣಪತಿಯ ಪೂಜಾರಿಯಾಗಿ ಸೇವೆಸಲ್ಲಿಸುತ್ತಿದ್ದನು. ನಂತರ ತನ್ನ ಉಪಜೀವನಕ್ಕಾಗಿ ಕುಟುಂಬ ಪರಿವಾರದೊಂದಿಗೆ ಇಚಲಕರಂಜಿಯ ಘೋರ್ಪಡೆ ಮನೆತನಕ್ಕೆ ಬಂದು ಪೂಜಾರಿ ವೃತ್ತಿ ಆರಂಭಿಸಿದನು. ಮುಂದೆ ಬಾಲಾಜಿ ವಿಶ್ವಾನಾಥ ಪೇಶ್ವೆ ತನ್ನ ಮಗಳನ್ನು ಇಚಲಕರಂಜಿ ರಾಜಮನೆತನಕ್ಕೆ ಕೊಟ್ಟು ವಿವಾಹ ಮಾಡಿಕೊಟ್ಟನು. ಈ ಹಿನ್ನಲೆಯಲ್ಲಿ **ಹರಭಟ್ಟನ** ಮಗ **ರಾಮಚಂದ್ರನ್** ಪೇಶ್ವೆಗಳ ಅಶ್ವದಳದಲ್ಲಿ ಸೈನಿಕ ಹುದ್ದೆಯನ್ನು ಪಡೆದುಕೊಂಡು,

ಪೋರ್ಚುಗಿಸ್‌ರ ವಿರುದ್ಧ ಬೆಸಿನ್‌ಪೋರ್ಟದಲ್ಲಿ ತನ್ನ ಶೌರ್ಯ ಸಾಹಸವನ್ನು ಪ್ರದರ್ಶಿಸಿ, ಪೇಶ್ವೆ ಕಡೆಯಿಂದ ಪ್ರಶಂಸೆ ಪಡೆದುಕೊಂಡು, ಕಮಾಂಡರ್ ಹುದ್ದೆ ಪಡೆದುಕೊಂಡನು. ಈತನ ಮರಣದ ತರುವಾಯ ತನ್ನ ಮಗನಾದ **ಪರಶುರಾಮಬಾಹು** ಕ್ರಿ.ಶ. 1737 ರಲ್ಲಿ ಮರಾಠ ಸಾಮ್ರಾಜ್ಯದಲ್ಲಿ ಕಮಾಂಡರ್ ಇನ್ ಚೀಪ್ ಹುದ್ದೆ ಪಡೆದುಕೊಂಡು, ಮಾಧವರಾವ್ ಪೇಶ್ವೆಯಿಂದ **ತಾಸಗಾಂವ** ಎಂಬ ಪ್ರದೇಶವನ್ನು 1763 ರಲ್ಲಿ ಉಂಬಳಿಯಾಗಿ ಪಡೆದುಕೊಂಡನು. ಜಮಖಂಡಿ ತಾಸಗಾಂವದ ಒಂದು ಭಾಗವಾಗಿತ್ತು. **ಕ್ರಿ.ಶ. 1775 ರಲ್ಲಿ ಇಲ್ಲಿ ಒಂದು ಕೋಟೆಯನ್ನು** ಕಟ್ಟಿಸಲಾಯಿತು. ಇದರ ರಕ್ಷಣೆಗಾಗಿ ಅಧಿಕಾರಿಗಳನ್ನು ನೇಮಿಸಲಾಯಿತು. ಮಾಧವರಾವ್ ಪೇಶ್ವೆ ಹೈದರಲಿ ಟಿಪ್ಪುಸುಲ್ತಾನನೊಂದಿಗೆ ಯುದ್ಧ ಕೈಗೊಂಡಾಗ ಪರಶುರಾಮ್‌ಬಾಹು ತನ್ನ ಪರಾಕ್ರಮವನ್ನು ಪ್ರದರ್ಶಿಸಿದನು. ಮುಂದೆ 1799 ರಲ್ಲಿ ಪರಶುರಾಮಬಾಹು ಕೊಲ್ಹಾಪೂರ ಸಮೀಪ ಪಟಕುಂಡಿ ಯುದ್ಧದಲ್ಲಿ ಮರಣ ಹೊಂದಿದನು. ನಂತರ ತಾಸಗಾಂವ ಜಾಹಾಗೀರ ಮೂರು ವಿಭಾಗಗಳಲ್ಲಿ ವಿಂಗಡಣೆಯಾಯಿತು. ಕಾರಣ ಪರಶುರಾಮನಿಗೆ ಮೂರು ಮಂದಿ ಮಕ್ಕಳು. ಆತನ ಹಿರಿಯ ಮಗನೆ **ರಾಮಚಂದ್ರಪಂಥ ಅಪ್ಪಾ** ಎಂಬುವನಾಗಿದ್ದನು.

**ರಾಜಕೀಯ ಚರಿತ್ರೆ:**

**ರಾಮಚಂದ್ರಪಂಥ ಅಪ್ಪಾ**ಕ್ರಿ.ಶ. 1799 ರಿಂದ 1811 ರ ವರೆಗೆ ತಾಸಗಾಂವದಲ್ಲಿ ಆಳ್ವಿಕೆ ಮಾಡಿದನು. ಆ ಸಂದರ್ಭದಲ್ಲಿ ಕ್ರಿ.ಶ. 1811 ರಲ್ಲಿ ಜಮಖಂಡಿ ಸಂಸ್ಥಾನದ ಜಹಾಗೀರನಾಗಿ ಅಧಿಕಾರ ಪಡೆದುಕೊಂಡನು ಹೀಗಾಗಿ ಇವನನ್ನು ನಿಜವಾದ ಜಮಖಂಡಿ ಸಂಸ್ಥಾನದ ಸಂಸ್ಥಾಪಕ ಎಂದು ಕರೆಯಲಾಗಿದೆ. ಜಮಖಂಡಿ ನಗರದ ಸುತ್ತಲೂ ರಕ್ಷಣಾ ಕೋಟೆಯನ್ನು ಕಟ್ಟುವದರ ಜೋತೆಗೆ ನಗರದ ಒಳಭಾಗದಲ್ಲಿ ಆಡಳಿತ ಕಛೇರಿಯನ್ನು ನಿರ್ಮಿಸಿದನು. ಮುಂದೆ ಇವನು ಕ್ರಿ.ಶ. 1813 ರಲ್ಲಿ ಮರಣ ಹೊಂದಿದನು.





S.T.C. Arts and Commerce College BANHATTI 587 311

**ಗೋಪಾಲರಾವ್ ರಾಮಚಂದ್ರ ಪಟವರ್ಧನ : ಕ್ರಿ.ಶ. 1813 ರಿಂದ 1840**

ತಂದೆ ರಾಮಚಂದ್ರ ಅಪ್ಪಾನ ಮರಣದ ತರುವಾಯ ಕ್ರಿ.ಶ. 1813 ರಲ್ಲಿ ಸಂಸ್ಥಾನದ ರಾಜನಾದನು. ಮುಂದೆ ಕ್ರಿ.ಶ. 1818 ರಲ್ಲಿ ಪುಣೆಯ ಸಮೀಪ ಕಿರ್ಕಿ ಯುದ್ಧದಲ್ಲಿ ಪೇಶ್ವೆಗಳು ಬ್ರಿಟೀಷ ಇಸ್ಟ್ ಇಂಡಿಯಾ ಕಂಪನಿ ಜೋತೆಗೆ ಸೋತು ಸಂಧಾನ ಮಾಡಿಕೊಂಡು ಸ್ನೇಹ ಬೆಳಸಿದರು. ಕ್ರಿ.ಶ. 1821 ರ ಪ್ರಕಾರ 20,840ರೂ.ಗಳನ್ನು ವಾರ್ಷಿಕವಾಗಿ ತೆರಿಗೆ ರೂಪದಲ್ಲಿ ಬ್ರಿಟೀಷರಿಗೆ ನೀಡಲು ಒಪ್ಪಂದವಾಯಿತು.ಜಮಖಂಡಿ ರಾಜ ಗೋಪಾಲರಾವಗೆ ಮಕ್ಕಳಿಲ್ಲದ ಕಾರಣ ಆಸಂಗಿಯ ಅಂತಾಜಿ ಯಾದವಾಡಕರವರ ಮಗನಾದ ಗಣಪತಿಯನ್ನು ದತ್ತಕ ಪಡೆದುಕೊಂಡು ರಾಮಚಂದ್ರರಾವ ಅಪ್ಪಾಸಾಹೇಬ ಪಟವರ್ಧನ ಎಂಬ ಹೆಸರನ್ನು ಪುನಃ ನಾಮಕರಣಮಾಡಿ ಕ್ರಿ.ಶ.1840ರಲ್ಲಿ ಮರಣಹೊಂದಿದನು.

**ರಾಮಚಂದ್ರರಾವ ಅಪ್ಪಾಸಾಹೇಬ ಪಟವರ್ಧನ :ಕ್ರಿ.ಶ.1840 ರಿಂದ 1897**

ಗೋಪಾಲರಾವ ಅವರ ಮರಣದ ತರುವಾಯ ರಾಮಚಂದ್ರರಾವ ಕ್ರಿ.ಶ.1840 ರಲ್ಲಿ ಜಮಖಂಡಿಯ ರಾಜನಾದನು.ಬ್ರಿಟಿಷರೊಂದಿಗೆ ಸುಗಮವಾಗಿ ಆಡಳಿತ ನಡೆಸಿ ಅನೇಕ ಸುಧಾರಣೆಗಳನ್ನು ಮಾಡಿದನು.ಕ್ರಿ.ಶ. 1857 ರಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮ ಭುಗಿಲೆದ್ದಾಗ ಜಮಖಂಡಿಯ ರಾಜಾ ಮುಧೋಳ, ನರಗುಂದ ಹಾಗೂ ಹಲಗಲಿ ಬೇಡರೊಂದಿಂಗೆ ಕುಡಿಕೊಂಡು ದಂಗೆಯಲ್ಲಿ ಧುಮುಕಿದನು. ಇವರ ಜೊತೆಗೆ ಜಮಖಂಡಿಯ ಸಿಪಾಯಿ ಭೋಟುಸಿಂಗ ಉಗ್ರ ಹೋರಾಟ ಮಾಡಿದನು. ಇದನ್ನು ತಿಳಿದ ಬ್ರಿಟೀಷ ಎಜೇಂಟ್ ಮ್ಯಾನಸನ ಜಮಖಂಡಿ ಕಡೆಗೆ ಧಾವಿಸಿದನು. ಈ ಸುದ್ಧಿ ತಿಳಿದ ರಾಮಚಂದ್ರರಾವ್ ತಮ್ಮ ಶಸ್ತ್ರಾಸ್ತ್ರಗಳನ್ನು ಅರಮನೆಯ ಸಮೀಪದ ಬಾವಿಯಲ್ಲಿ ಮುಚ್ಚಿಟ್ಟನು. ಈಗಲೂ ಆ ಬಾವಿಗೆ ಸ್ಥಳೀಕರು **ರಾಜಚ ವಿರಿತ್ ಲಪೌಲೆ** ಎಂದು ಕರೆಯುತ್ತಾರೆ. ತದನಂತರ ಮ್ಯಾನಸನ್ ರಾಮಚಂದ್ರರಾವ್ ಅವರನ್ನು ಬಂಧಿಸಿ, ಬೆಳಗಾವಿ ಜೈಲಿಗೆ ಹಾಕಿದಾಗ

ISSN-2454-678X
VOL-7, ISSUE -3, April 01, 2021 to May 15, 2021
ಸಂಪುಟ-7, ಸಂಚಿಕೆ-3, ಏಪ್ರಿಲ್ 01, 2021 ರಿಂದ ಮೇ 15, 2021

S.T.C. Arts and Commerce College BANHATTI 587 311

ಘೋಟಾಸಿಂಗ್ ದಂಗೆಗೆ ನಾನೇ ಕಾರಣ ಎಂದು ಹೇಳಿ ಗಲ್ಲಿಗೆ ಗುರಿಯಾದನು. ಇದರಿಂದ ರಾಮಚಂದ್ರರಾವ್‌ನನ್ನು ಕಾರಗೃಹದಿಂದ ಬಿಡುಗಡೆಗೊಳಿಸಲಾಯಿತು.

ರಾಮಚಂದ್ರರಾವ್ ಶಿಕ್ಷಣಕ್ಕೆ ಅಪಾರ ಕೊಡುಗೆ ನೀಡಿದನು. ಸಂಸ್ಥಾನದಲ್ಲಿ ಆಂಗ್ಲಭಾಷೆಯ ಶಿಕ್ಷಣವನ್ನು ಜಾರಿಗೆ ತಂದನು. ಇದಕ್ಕಾಗಿ ಪ್ರತ್ಯೇಕ ಶಿಕ್ಷಣ ಇಲಾಖೆಯನ್ನು ಸ್ಥಾಪಿಸಿದನು. ಸರಕಾರಿ ನೌಕರಿ ಪಡೆಯಬೇಕಾದರೆ, ಶಿಕ್ಷಣ ಪಡೆಯಲೇಬೇಕು ಎಂದು ಕ್ರಿ.ಶ. 1865 ಫೆಬ್ರವರಿ 01 ರಂದು ಆಜ್ಞೆ ಹೊರಡಿಸಿದನು. ಜಮಖಂಡಿಯ ಹೊರಭಾಗದಲ್ಲಿ ಗುಡ್ಡಕ್ಕೆ ಹೊಂದಿಕೊಂಡಿರುವ ರಾಮತೀರ್ಥದಲ್ಲಿ ಅರಮನೆ ಹಾಗೂ ದಿವಾನರ ಕಟ್ಟಡಗಳನ್ನು ಕಟ್ಟಿಸಿದನು. ಜಮಖಂಡಿ ಮತ್ತು ಬನಹಟ್ಟಿಯಲ್ಲಿ ಕ್ರಿ.ಶ. 1872 ಹಾಗೂ 1886 ರಲ್ಲಿ ಪುರಸಭೆಯನ್ನು ನಿರ್ಮಿಸಿ ಆ ಮುಖಾಂತರ ನಗರಗಳ ನೈರ್ಮುಲ್ಯಕರಣ ಹಾಗೂ ನೀರಾವರಿ ವ್ಯವಸ್ಥೆ ಮಾಡಿಸಿದನು. ಹೀಗೆ ಸುಮಾರು 57 ವರ್ಷಗಳ ವರೆಗೆ ಸುಧಿರ್ಘ ಆಳ್ವಿಕೆಗೆ ಮಾಡಿ ಕ್ರಿ.ಶ. 1897 ರಲ್ಲಿ ಮರಣ ಹೊಂದಿದನು. ಇತನಿಗೆ ಗಂಡು ಮಕ್ಕಳಿಲ್ಲದ ಕಾರಣ ಚಿಂಚಣಿಕರ ಮನೆತನದ ಮಗುವನ್ನು ದತ್ತು ತೆಗೆದು ಅದಕ್ಕೆ ಪರಶುರಾಮಬಾಹು ಎಂಬ ನಾಮಕರಣ ಮಾಡಿ ಸಂಸ್ಥಾನದ ರಾಜನನ್ನಾಗಿ ಮಾಡಿದನು.

**ಸರ್ ಕ್ಯಾಪ್ಟನ್ ಪರಶುರಾಮಬಾಹು ಪಟವರ್ಧನ : ಕ್ರಿ.ಶ. 1897 ರಿಂದ 1924**

ರಾಮಚಂದ್ರರಾವ್ ಅಪ್ಪಾಸಾಹೇಬ ಮರಣದ ತರುವಾಯ ದತ್ತು ಮಗನಾದ ಪರಶುರಾಮಬಾಹು ಕ್ರಿ.ಶ. 1897 ರಲ್ಲಿ ಜಮಖಂಡಿ ಸಂಸ್ಥಾನದ ಪಟ್ಟಾಧಿಕಾರಿಯಾದನು. ಇವನು ಶೌರ್ಯ, ಸಾಹಸವುಳ್ಳವನಾಗಿದ್ದರಿಂದ ಬ್ರಿಟಿಷರು ಕ್ಯಾಪ್ಟನ್ ಪದವಿಯನ್ನು ನೀಡಿ ಕ್ರಿ.ಶ. 1914 ರಲ್ಲಿ ಪ್ರಥಮ ಜಾಗತೀಕ ಯುದ್ಧಕ್ಕಾಗಿ ಬ್ರಿಟಿಷರ ಪರವಾಗಿ ಹೋರಾಟ ಮಾಡಲು ಫ್ರಾನ್ಸ್‌ಗೆ ಕಳುಹಿಸಿದರು. ಅದರಲ್ಲಿ ತನ್ನ ಧಿಟ್ಟತನವನ್ನು ಪ್ರದರ್ಶಿಸಿದ್ದರಿಂದ ಬ್ರಿಟಿಷ ಸರಕಾರ ಇವರಿಗೆ ಸರ್ ಮತ್ತು ರಾಜಾ ಎಂಬ ಬಿರುದನ್ನು ನೀಡಿದರು. ಮುಂದೆ ಇವರನ್ನು ಕೊಲ್ಹಾಪೂರ, ರಾಮದುರ್ಗ, ಮುಧೋಳ, ಸಾಂಗಲಿ, ಕುರಂದವಾಡ, ಮಿರಜ ಸಂಸ್ಥಾನದ ರಾಜರ ಮಕ್ಕಳಿಗೆ



ISSN-2454-678X
VOL-7, ISSUE -3, April 01, 2021 to May 15, 2021
ಸಂಪುಟ-7, ಸಂಚಿಕೆ-3, ಏಪ್ರಿಲ್ 01, 2021 ರಿಂದ ಮೇ 15, 2021

ಸೈನಿಕ ತರಬೇತಿಯನ್ನು ನೀಡಲು ನೇಮಕ ಮಾಡಿದರು. ಇವರು ಸಂಸ್ಥಾನದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿದರು, ಇದರಲ್ಲಿ ಜಮಖಂಡಿಯ ಪೋಲೊ ಕ್ಲಬ್ ಕೂಡಾ ಒಂದಾಗಿದೆ.

ಪ್ರಜೆಗಳ ಸುಧಾರಣೆಗೆ ಸಂಸ್ಥಾನದಲ್ಲಿ **ಪ್ರಜಾಪರಿಷತ್‌**ನ್ನು ಆರಂಭಿಸಿದರು. ರಾಜ ಮತ್ತು ಪ್ರಜೆಗಳ ನಡುವೆ ಭಾಂದವ್ಯ ಗಟ್ಟಿಗೊಳಿಸಲು ಕ್ರಿ.ಶ. 1917 ರಲ್ಲಿ ಲೋಕಸಭೆಯನ್ನು ಸಹ ಸ್ಥಾಪಿಸಲಾಯಿತು. ಅಂದು ವಸುದೇವರಾವ್ ವಾಟವೆ, ಲಕ್ಷ್ಮಣ ಪರಂಜಪೆ, ಆಪ್ಟೆ, ಸದಾಶಿವರಾಯ ಪೆಂಡಸೆ ಮುಂತಾದವರು ಇದರ ಸದಸ್ಯರಾಗಿದ್ದರು. ಲೋಕಸಭೆಯ ಮುಂಖಾತರ ಪ್ರಜಾಪರಿಷತ್ ಏರ್ಪಡಿಸಿ ಇದರ ಮುಂಖಾಂತರ ಮಧ್ಯಪಾನ ನಿಷೇಧ, ಗೋವಧೆ ನಿಷೇಧ ಹಾಗೂ ನೀರಾವರಿ ಯೋಜನೆಗಳನ್ನು ಕೈಗೊಂಡರು. ಮರಾಠಿ ಆಡಳಿತ ಭಾಷೆಯಾಗಿದ್ದರು ಕೂಡ ಕನ್ನಡಕ್ಕೆ ಆಧ್ಯತೆ ನೀಡಲಾಗಿತ್ತು ಎಂದು ಆಧಾರಗಳಿಂದ ತಿಳಿಯುತ್ತದೆ. ತದನಂತರ ಕ್ರಿ.ಶ. 1924 ರಲ್ಲಿ ಆನೆ ತುಳಿತಕ್ಕೆ ತುತ್ತಾಗಿ ಪರಶುರಾಮಬಾಹು ಮರಣ ಹೊಂದಿದನು.

**ಶಂಕರರಾವ ಪಟವರ್ಧನ ಕ್ರಿ.ಶ. 1924 ರಿಂದ 1947**

ರಾಮಚಂದ್ರರಾವ್ ಮರಣದ ತರುವಾಯ ಶಂಕರರಾವ್ ಅಪ್ಪಾಸಾಹೇಬ ಪಟವರ್ಧನ ಕ್ರಿ.ಶ. 1924 ರಲ್ಲಿ ಪಟ್ಟಕ್ಕೆ ಬಂದನು. ಇವನ ಕಾಲದಲ್ಲಿ ಶೈಕ್ಷಣಿಕ, ಕಲೆ, ಸಾಮಾಜಿಕ ಸುಧಾರಣೆಗಳನ್ನು ಕೈಗೊಂಡಿದ್ದು ತಿಳಿದು ಬರುತ್ತದೆ. ಪುಣೆಯಲ್ಲಿ ಎಸ್.ಪಿ. ಕಾಲೇಜನ್ನು ಸ್ಥಾಪಿಸಿದನು. ಬನಹಟ್ಟಿ, ಜಮಖಂಡಿ, ಕುಂದಗೋಳದಲ್ಲಿ ಪ್ರೌಢಶಾಲೆಯನ್ನು ತೆರೆದನು. ಉಚಿತ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಕಲ್ಪಿಸಿಕೊಡಲಾಯಿತು. ಶಿಷ್ಯವೇತನ, ಊಟ, ವಸತಿ ನಿಲಯಗಳನ್ನು ಸ್ಥಾಪಿಸುವುದರ ಜೊತೆಗೆ ವಯಸ್ಕರ ಶಿಕ್ಷಣ ಹಾಗೂ ಹೆಣ್ಣುಮಕ್ಕಳ ಶಾಲೆಯನ್ನು ತೆರೆದನು. ಮುಖ್ಯವಾಗಿ ಪರಿಶಿಷ್ಟ ಜಾತಿಯವರನ್ನು ನಿರ್ಲಕ್ಷಿಸಿದ ಆ ಸಮಾಜದಲ್ಲಿ ಬ್ರಾಹ್ಮಣ ಸಂಸ್ಥಾನಿಕರಾದ ಇವರು, ಇವರಿಗಾಗಿಯೇ ಪ್ರತ್ಯೇಕ ಶಾಲೆ, ಊಟ, ವಸತಿ ನಿಲಯ

ತೆರೆಯಲಾಯಿತು. ಆ ಕಟ್ಟಡಗಳನ್ನು ಈಗಲೂ ನೋಡಬಹುದಾಗಿದೆ. ಜಾತಿ ಪದ್ಧತಿ ಹೋಗಲಾಡಿಸಲು ಪ್ರಯತ್ನಿಸಿದರು. ಹಾಗೆಯೇ ಪವರ್‌ಹೌಸ್ ಮುಖಾಂತರ ವಿದ್ಯುತ್ ಉತ್ಪಾದನೆ ಮಾಡಿ ಜಮಖಂಡಿಯಲ್ಲಿ ಬೆಳಕು ತಂದರು. ಕುಡಿಯುವ ನೀರಿನ ಪೂರೈಕೆ ಮಾಡಿದರು. ಅನೇಕ ದೇವಸ್ಥಾನಗಳಿಗೆ ಉಂಬಳಿಯನ್ನು ನೀಡಿದರು. ಉದಾಹರಣೆಗೆ ಬನಹಟ್ಟಿಯ ಕಾಡಸಿದ್ಧೇಶ್ವರ ದೇವಾಲಯಕ್ಕೆ ರಥ, ಕಲ್ಲೋಳ್ಳಿಯ ವೆಂಕರಮಣನಿಗೆ ರಥ ಮುಂತಾದ ದೇವಾಲಯಗಳಿಗೆ ಉಂಬಳಿ ನೀಡಲಾಯಿತು.

ರಾಮಚಂದ್ರ ಪ್ರಸಾದ ಎಂಬ ಸುಂದರವಾದ ಅರಮನೆಯನ್ನು ರಾಮತೀರ್ಥದಲ್ಲಿ ಇಂಡೋ-ಯುರೋಪಿಯನ್ ಶೈಲಿಯಲ್ಲಿ ನಿರ್ಮಿಸಿದರು ಹಾಗೂ ದರ್ಬಾರ ಹಾಲ್‌ಗಳನ್ನು ನಿರ್ಮಿಸಿದರು. ಕ್ರಿ.ಶ. 1934 ರಲ್ಲಿ ಪ್ರತಿನಿಧಿ ಸಭೆ ಆರಂಭಿಸಿದರು. ಇದರಲ್ಲಿ 16 ಮಂದಿ ಸದಸ್ಯರಿದ್ದರು. ಇವರು ಪ್ರಜೆಗಳಿಂದ ನಾಮಕರಣಗೊಂಡರೆ ಉಳಿದ 14 ಮಂದಿ ನೇರ ನಾಮಕರಣಗೊಂಡಿದ್ದರು.

ಜಮಖಂಡಿ ಸಂಸ್ಥಾನ ವಿಶೇಷವಾಗಿ ಸಂಗೀತಕ್ಕೆ ಪ್ರೋತ್ಸಾಹ ನೀಡಿತು. ಇವರು ಹಿಂದೂಸ್ಥಾನಿ ಸಂಗೀತ ಪರಿಚಯವನ್ನು ಉತ್ತರ ಕರ್ನಾಟಕಕ್ಕೆ ಪ್ರೋತ್ಸಾಹಿಸಿದವರೆ ಇವರು. ಅಬ್ದುಲ್ ಕರೀಂಖಾನ್ ಎಂಬ ಖ್ಯಾತ ಗಾಯಕರು ಇಲ್ಲಿದ್ದರು. ಮರಾಠಿ ನಾಟಕ ತಂಡಗಳು ಸಂಸ್ಥಾನವನ್ನು ಸಂಚರಿಸುತ್ತಾ ಮನೋರಂಜನೆ ನೀಡುತ್ತಿದ್ದವು. ವಿನೋಬಾ ಭಾವೆ, ಡಾ. ಮಹಾದೇವ ರಾನಡೆ ಮಹಾನ್ ತತ್ವಜ್ಞಾನಿಗಳು ಇಲ್ಲಿಯ ವಿದ್ಯಾರ್ಥಿಗಳಾಗಿದ್ದು ಅನೇಕ ಕೃತಿಗಳನ್ನು ಬರೆದರು. ಮರಾಠಿ ಮತ್ತು ಕನ್ನಡ ಸಾಹಿತ್ಯ ಇಲ್ಲಿ ಬೆಳವಣಿಗೆ ಹೊಂದಿತ್ತು. ಕುಸ್ತಿಪಟುಗಳಿಗೆ ಸಂಸ್ಥಾನಿಕರು ಪ್ರಾಧಾನ್ಯತೆ ನೀಡಿದರು. ಮುಂದೆ ಶಂಕರರಾವ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ 7 ದಿವಸದಲ್ಲಿ ಮುಂಬೈಯಲ್ಲಿ ಮರಣ ಹೊಂದಿದರು.

**ಪರಶುರಾಮ ಬಾಹು ಪಟವರ್ಧನ: ಕ್ರಿ.ಶ. 1947 ರಿಂದ 1948**

ಶಂಕರರಾವ್ ಅಪ್ಪಾಸಾಹೇಬ ಪಟವರ್ಧನ ಕ್ರಿ.ಶ. 1947 ರಲ್ಲಿ ಮರಣ ಹೊಂದಿದ ತರುವಾಯ ಪರಶುರಾಮ ಬಾಹು ಕ್ರಿ.ಶ. 1947 ಅಗಷ್ಟ ತಿಂಗಳಲ್ಲಿ





ಅಧಿಕಾರಕ್ಕೆ ಬಂದರು. ಆ ಸಮಯದಲ್ಲಿ ಕರ್ನಾಟಕ ಏಕೀಕರಣ ಚಳುವಳಿ ಶ್ರೀ ಶಮ್ಮಣ್ಣಪ್ಪ ಚಿಕ್ಕೋಡಿಯವರ ನೇತೃತ್ವದಲ್ಲಿ ಕ್ರಾಂತಿಕಾರಕ ಚಟುವಟಿಕೆಗಳು ನಡೆದವು. ಇದರಿಂದ ಬನಹಟ್ಟಿಯಲ್ಲಿ ಸಂಸ್ಥಾನದ ಪ್ರಜಾಪರಿಷತ್ತಿನಲ್ಲಿ ಚರ್ಚಿಸಿ, ಸರದಾರ ವಲ್ಲಭಾಯಿ ಪಟೇಲ ಅವರನ್ನು ಕಂಡು ಜಮಖಂಡಿ ಸಂಸ್ಥಾನವನ್ನು ಭಾರತದಲ್ಲಿ ವಿಲೀನೀಕರಣಗೊಳಿಸಲು ತೀರ್ಮಾನಿಸಲಾಯಿತು. ಹೀಗಾಗಿ ಸಂಸ್ಥಾನ ಕ್ರಿ.ಶ. 1948 ಮಾರ್ಚ 18 ರಂದು ವಿಲೀನೀಕರಣಗೊಂಡ ಪ್ರಥಮ ಸಂಸ್ಥಾನವಾಗಿದೆ.

**ಉಪಸಂಹಾರ:**

ಜಮಖಂಡಿ ಸಂಸ್ಥಾನ 163 ವರ್ಷಗಳ ಕಾಲ ಸುಧೀರ್ಘ ಆಳ್ವಿಕೆಯಲ್ಲಿ ಜಮಖಂಡಿ, ಕುಂದಗೋಳ, ಬನಹಟ್ಟಿ ಹಾಗೂ ಸಾವಳಗಿ ಎಂಬ ತಾಲೂಕುಗಳನ್ನು ಒಳಗೊಂಡಿತ್ತು. ಜಮಖಂಡಿ ತಾಲೂಕಿನಲ್ಲಿ 59 ಗ್ರಾಮಗಳು, ಕುಂದಗೋಳದಲ್ಲಿ 16 ಗ್ರಾಮಗಳಿದ್ದವು ಒಟ್ಟಿಗೆ 91 ಗ್ರಾಮಗಳನ್ನು ಒಳಗೊಂಡ ಈ ಸಂಸ್ಥಾನ 524 ಚದರ ಮೈಲು ವಿಸ್ತಾರವನ್ನು ಹೊಂದಿತ್ತು. ಇದರ ಜೊತೆಗೆ ಸಾತಾರ ಸಂಸ್ಥಾನದಲ್ಲಿರುವ ವಿಟಾರಾ ಮತ್ತು ಶಿರಿಂದ್ರ ಗ್ರಾಮಗಳು, ಬೆಳಗಾವಿಯ ಎಲ್ಲುಂಡೆ, ಅಹ್ಮದನಗರದ ವಿಶಲಪೂರಿ ಹಾಗೂ ಧವರಗಿರಿ ಗ್ರಾಮಗಳು ಜಮಖಂಡಿ ಸಂಸ್ಥಾನಕ್ಕೆ ಕೂಡಿಕೊಂಡಿದ್ದವು. ಒಟ್ಟಿಗೆ ಈ ಸಂಸ್ಥಾನದಿಂದ 4,12,430/- ರೂಪಾಯಿ ಕಂದಾಯ ರೂಪದಲ್ಲಿ ಬರುತ್ತಿತ್ತು. ಒಟ್ಟಾರೆ ಜಮಖಂಡಿ ಸಂಸ್ಥಾನ ಬ್ರಿಟೀಷರೊಂದಿಗೆ ಉತ್ತಮ ಭಾಂದವ್ಯವಿರುವುದರಿಂದ ರಾಮಚಂದ್ರರಾವ್ ಅಪ್ಪಾಸಾಹೇಬ ಪಟವರ್ಧನ ಹಾಗೂ ಶಂಕರರಾವ್ ಅಪ್ಪಾಸಾಹೇಬ ಪಟವರ್ಧನ ಕಾಲದಲ್ಲಿ ಆಡಳಿತ, ರಾಜಕೀಯ, ಶೈಕ್ಷಣಿಕ, ಕೃಷಿ, ಸಾಮಾಜಿಕ, ಧಾರ್ಮಿಕ ಹಾಗೂ ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಅವಿಸ್ಮರಣಿಯವಾದ ಸುಧಾರಣೆಯನ್ನು ಕಂಡಿತು.

Coordinator IQAC

**ಗ್ರಂಥಋಣ:**

1. ಪಾಠಕ ಎಚ್.ಡಿ. : ರಾಮಚಾಂದ್ರರಾವ್ ಗೋಪಾಲರಾವ್ ಪಟವರ್ಧನ ಅಲಿಯಾಸ್ ಅಪ್ಪಾಸಾಹೇಬ ಜಮಖಂಡಿ **ಯಾಂಚೆ ಚರಿತ್ರ** (ಮರಾಠಿ).

2. ಪಟವರ್ಧನ ವಿ. ಜಿ. : ಹರಿ ವಂಶಾಚಿ ಬುಕಾರ್ ಜಮಖಂಡಿ ಸಂಸ್ಥಾನಚ ಸಂಕ್ಷಿಪ್ತ ಇತಿಹಾಸ ಯಾಂಚಿ ಭೂಗೋಳ (ಮರಾಠಿ).

3. ಖಾಡಿಲ್ಕರ ಎಂ. ಡಿ. : ಜಮಖಂಡಿ ಸಂಸ್ಥಾನ ಉತ್ಪತ್ತಿ, ಸ್ಥಿತಿ, ಲಯಾ – 1975.

4. ಕ್ಯಾಪ್ಟನ್ ಎಡ್ವರ್ಡ್ ಡಬ್ಲ್ಯು : ವೆಸ್ಟ್ ಮೇಮರಿ ಆಫ್ ಸ್ಟೇಟ್ ಆಫ್ ದಿ ಮರಾಠಾ ಕಂಟ್ರಿ – 1899.

5. ಡಾ. ನಿಡೋಣಿ ಕೆ. ಎ. : ಎ ಸ್ಟಡಿ ಆಫ್ ಜಮಖಂಡಿ ಸ್ಟೇಟ್.

6. ಡಾ. ಆರ್. ಮುನಿಸ್ವಾಮಿ : ವಿಜಾಪೂರ ಜಿಲ್ಲಾ ಗೇಜಟಿಯರ್ – 1999

7. ಡಾ. ಎಸ್. ಚಂದ್ರಶೇಖರ – ಕನ್ನಡಕ್ಕೆ ಅನುವಾದ ಸಿ. ನಾಗಣ್ಣ : ದಕ್ಷಿಣ ಭಾರತ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ – 2000.

S.T.C. Arts and Commerce College BANHATTI 587 311

Co-ordinator
IQAC
JSS STC Art's and Commerce College.
BANHATTI -587311. Dist. Bagalkote.

PRINCIPAL
STC Arts & Commerce College
BANHATTI (Dist: Bagalkot)